# <u>ಮನ್ನಾರು ಕೃಷ್ಣಗೆ ಮಂಗಳ</u>

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings, given without highlights, are as per book in Ref. 1. The wordings in book in Ref. 2 and that of the singer are matching and the differences are marked in yellow highlights.

ರಾಗ: ತೋಡಿ ತಾಳ: ಆದಿ

ಮನ್ನಾರು ಕೃಷ್ಣಗೆ ಮಂಗಳ
ಜಗವ ಮನ್ನಿಸಿದೊಡೆಯಗೆ ಮಂಗಳ || ಪ ||

ಬೊಮ್ಮನ ಪಡೆದಗೆ ಭಕ್ತರುದ್ಧಾರಿಗೆ
ಕಮ್ಮಗೋಲನಯ್ಯಗೆ ಮಂಗಳ
ಧರ್ಮ ಸಂರಕ್ಷಕನಿಗೆ ದಾನವ ಶಿಕ್ಷಗೆ
ನಮ್ಮ ರಕ್ಷಕನಿಗೆ ಮಂಗಳ || ೧ ||

ತುರುಗಳ ಕಾಯ್ದಗೆ ಕರುಣಾಕರನಿಗೆ
(ಗಿರಿಯನೆತ್ತಿದವಗೆ) (ಗಿರಿಯನೆತ್ತಿದನಿಗೆ) ಮಂಗಳ
(ವರದ) (ಪುರದ) ತಿಮ್ಮಪ್ಪಗೆ ವಾರಿಜನಾಭಗೆ
ಹರಿ ಸರ್ವೋತ್ತಮನಿಗೆ ಮಂಗಳ || ೨ ||

ದೇವಕಿ ದೇವಿಯ ತನಯಗೆ ಮಂಗಳ
ದೇವ ತಿಮ್ಮಪ್ಪಗೆ ಮಂಗಳ
ಮಾವನ ಕೊಂದು ಮಲ್ಲರ ಮಡುಹಿದ
ಪುರಂದರ ವಿಠಲಗೆ ಮಂಗಳ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮನ್ನಾರು** – ಮನೋಹರ

**ಬೊಮ್ಮನ...** – ಚತುರ್ಮುಖ ಬ್ರಹ್ಮನನ್ನು ತನ್ನ ನಾಭಿಕಮಲದಿಂದ ಹೊರಹೊಮ್ಮಿಸಿದವನು ನಾರಾಯಣ.

**ಕಮ್ಮಗೋಲನ ಅಯ್ಯ** – ಕಮ್ಮಗೋಲನ್ನು ಎಂದರೆ ಕಂಪುಳ್ಳ ಬಾಣವನ್ನು (ಕಮ್ಮು, ಕಂಪು, ಸುವಾಸನೆ, ಹೂಗಳು) ಹಿಡಿದವನು ಮನ್ಮಥ; ಅವನ ಅಯ್ಯನೆಂದರೆ ತಂದೆ, ನಾರಾಯಣ.

**ಧರ್ಮ ರಕ್ಷಕನಿಗೆ...** – ಭಗವದ್ಗೀತೆಯಲ್ಲಿರುವ 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ॥ ಎಂಬ ಮಾತಿನ ಆಧಾರ.

**ಮಾವನ ಕೊಂದು...** – ಮಧುರೆಯಲ್ಲಿ ಕಂಸನನ್ನು ಕೊಂದು, ಅವನು ಕಳುಹಿಸಿದ ಚಾಣೂರ ಮೊದಲಾದ ಮಲ್ಲರನ್ನು ಕೊಂದವನು, ಕೃಷ್ಣ.

**ತನಯ** = ಮಗ

**Classification:** Keerthane
**Ankita:** purandara vittala
**Location:** Mannaru Gudi, near Tanjavoor, Tamil Nadu. The temple is of Raja Gopala Krishna. In Gopala Murthy there are three types: Venugopala, Rajagopala, Madanagopala. This Rajagopala is holding whip in one hand and a stick in the other hand. The murthy is very beautiful and is special. Hence, Purandara Dasa specifically mentions: "turugala kaida..." in this song.
**Category:** Mangala Song
**Group Words:** Krishna, mannaru, Devaki, deva, devi, srinivasa, kamsa, dharma, asura,
**Pravachana:** NA
**Explanation:** NA